**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಬಿ.ಎಂ.ಫಾರೂಖ್ ಇವರು ನಿಯಮ 330 ರ ಪ್ರಶ್ನೆಗೆ ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರ ಉತ್ತರ:**

**ವಿಷಯ:** ಮಂಗಳೂರು ನಗರದ ಭಾಗವಾಗಿರುವ ಉಲ್ಲಾಳ ನಗರದಲ್ಲಿ ಸ್ಥಾಪಿತವಾಗಿರುವ ಫಿಷ್ ಮಿಲ್ ತಯಾರಿಕಾ ಘಟಕದಿಂದ ವ್ಯಾಪಕವಾಗಿ ಪರಿಸರದ ಮೇಲೆ ಉಂಟಾಗಿರುವ ಜಲ ಮತ್ತು ವಾಯುಮಾಲಿನ್ಯದಿಂದ ಈ ಪ್ರದೇಶದಲ್ಲಿ ವಾಸಿಸುತ್ತಿರುವ ಜನರು ಈ ಘಟಕಗಳಿಂದ ಆರೋಗ್ಯ ಮತ್ತು ದೈನಂದಿನ ಚಟುವಟಿಕೆಗಳ ಮೇಲೆ ಅಪಾರ ಪರಿಣಾಮ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಅಲ್ಲಿನ ನಾಗರೀಕರು ಇಂತಹ ಫಿಷ್ ಮಿಲ್ ತಯಾರಿಕಾ ಘಟಕವನ್ನು ಸ್ಥಳಾಂತರಿಸಿ ಮತ್ತು ರಾಜ್ಯದಲ್ಲಿ ಇಂತಹ ಘಟಕದಿಂದ ಪರಿಸರಕ್ಕೆ ಹಾನಿಯಾಗದಂತೆ ನೂತನ ರೀತಿ ಮತ್ತು ವೈಜ್ಞಾನಿಕ ತಂತ್ರಜ್ಞಾನ ಅಳವಡಿಸಿ ಅದೇ ರೀತಿ ಈ ಉದ್ಯಮದಲ್ಲಿರುವ ಉದ್ಯಮದಾರರಿಗೆ ಆದ್ಯತೆಯ ಮೇರೆಗೆ ಈ ಘಟಕಗಳ ಸ್ಥಳಾಂತರ ಅವಶ್ಯಕವಿರುವ ಜಾಗ ಆರ್ಥಿಕ ನೆರವು ಮತ್ತು ಇತರೆ ಮೂಲಸೌಕರ್ಯಗಳನ್ನೊಳಗೊಂಡ ಒಂದು ವಿಶೇಷ ಪ್ಯಾಕೇಜನ್ನು ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಮೀನುಗಾರರು ಒಳಗೊಂಡಂತೆ ಮೀನು ರಫ್ತುದಾರರಿಗೆ ಅನುಕೂಲ ಮಾಡಿಕೊಡುವ ಕುರಿತು ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

*****

**ಸರ್ಕಾರದ ಉತ್ತರ**:

ಮಂಗಳೂರು ನಗರದ ಉಳ್ಳಾಲ ಪ್ರದೇಶದಲ್ಲಿ ಪ್ರಮುಖವಾಗಿ 13 ಫಿಶ್‌ಮಿಲ್ ಮತ್ತು ಒಂದು ಸಾಮಾನ್ಯ ಕಲುಷಿತ ನೀರು ಶುದ್ದೀಕರಣ ಘಟಕಗಳು ಕಾರ್ಯಾಚರಣೆಯಲ್ಲಿರುತ್ತವೆ. ಉಳ್ಳಾಲ ಪ್ರದೇಶದಲ್ಲಿ ಪ್ರಮುಖವಾಗಿ ಫಿಶ್‌ಮಿಲ್ ಉದ್ದಿಮೆಗಳಿಂದ ವಾಸನೆ ಬರುತ್ತಿರುವುದರ ಬಗ್ಗೆ ದೂರುಗಳು ಬಂದಿರುತ್ತವೆ.

ಉಳ್ಳಾಲ ಪ್ರದೇಶದಲ್ಲಿರುವ 13 ಫಿಶ್‌ಮಿಲ್ ಘಟಕಗಳಲ್ಲಿ ಒಟ್ಟಾರೆ ಗೃಹ ಬಳಕೆ, ಬಾಯ್ಲರ್ ಮತ್ತು ಕೂಲಿಂಗ್ ಟವರ್‌ಗಳಲ್ಲಿ ಉಪಯೋಗಿಸಲಾಗುವ ನೀರಿನ ಪ್ರಮಾಣ 242.25 Kilolitre/day (KLD) ಮತ್ತು ವಿಸರ್ಜಿಸಲಾಗುವ ಕಲುಷಿತ ನೀರಿನ ಪ್ರಮಾಣ 428.2 KLD ಆಗಿರುತ್ತದೆ.

ಈ ಘಟಕಗಳಿಂದ ಉತ್ಪತ್ತಿಯಾಗುವ ಕಲುಷಿತ ನೀರನ್ನು ಸಂಗ್ರಹಿಸಿ, ಪೈಪ್‌ಲೈನ್ ಮೂಲಕ ಅದೇ ಪ್ರದೇಶದಲ್ಲಿರುವ ಸಾಮಾನ್ಯ ಶುದ್ದೀಕರಣ ಘಟಕದಲ್ಲಿ ಶುದ್ಧಿಕರಿಸಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ನೀಡಿರುವ ಸಮ್ಮತಿ ಪತ್ರದಲ್ಲಿ ನಿಬಂಧನೆಗಳನ್ನು ವಿಧಿಸಲಾಗಿದೆ. ಅದರಂತೆ ಉದ್ದಿಮೆಗಳು ತಮ್ಮ ಘಟಕದಲ್ಲಿ ಉತ್ಪತ್ತಿಯಾಗುವ ಕಲುಷಿತ ನೀರನ್ನು ಸಿಮೆಂಟಿನ ತೊಟ್ಟಿಗಳಲ್ಲಿ ಸಂಗ್ರಹಿಸಿ ಪೈಪ್‌ಲೈನ್ ಮೂಲಕ ಸಾಮಾನ್ಯ ಶುದ್ದೀಕರಣ ಘಟಕಕ್ಕೆ (CETP) ಸಾಗಿಸುತ್ತಿದ್ದಾರೆ. ಶುದ್ದೀಕರಿಸಿದ ನೀರು ನಿಗದಿತ ಮಾನದಂಡಕ್ಕೆ ಸರಿಹೊಂದಿದ್ದಲ್ಲಿ ಸಮುದ್ರದ ನೀರಿಗೆ ವಿಸರ್ಜಿಸಲು ಷರತ್ತು ವಿಧಿಸಲಾಗಿದೆ. ಮಂಡಳಿಯ ದಿನಾಂಕ: 31.12.2022ರ ವಿಶ್ಲೇಷಣಾ ವರದಿ ಪ್ರಕಾರ ಸಾಮಾನ್ಯ ಸಂಸ್ಕರಣಾ ಘಟಕದಿಂದ ಹೊರಬರುವ ಕಲುಷಿತ ನೀರು ಗುಣಮಾನಕಗಳಿಗೆ ಸರಿಹೊಂದುತ್ತಿಲ್ಲ.

ಕುಕ್ಕರ್, ಡ್ರೈಯರ್ ಮತ್ತು ಎವಾಪೋರೇಟರ್‌ನಂತಹ ಉಪಕರಣಗಳಿಂದ ಉತ್ಪತ್ತಿಯಾಗುವ ವಾಸನೆಯನ್ನು ತಡೆಗಟ್ಟಲು condenser ಮತ್ತು scrubber ಗಳನ್ನು ಅಳವಡಿಸಿ Bio-filter ಗಳ ಮೂಲಕ ಹಾಯಿಸಿ, ವಾಸನೆಯನ್ನು ಕಡಿಮೆ ಮಾಡುವಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು (KSPCB) ನೀಡಿರುವ ಸಮ್ಮತಿ ಪತ್ರಗಳಲ್ಲಿ ಷರತ್ತು ವಿಧಿಸಿದೆ. ಎಲ್ಲಾ ಉದ್ದಿಮೆಗಳು ಬಯೋಫಿಲ್ಟರ್‌ಗಳನ್ನು ಅಳವಡಿಸಿವೆ. ಆದರೆ ಇವುಗಳು ಸಮರ್ಪಕವಾಗಿ ಕಾರ್ಯನಿರ್ವಹಿಸದ ಕಾರಣ ಸುತ್ತಮುತ್ತಲಿನ ಪ್ರದೇಶದಲ್ಲಿ ವಾಸನೆ ಇರುವುದರ ಬಗ್ಗೆ ದೂರುಗಳು ಬಂದಿರುತ್ತವೆ. ಅಲ್ಲದೆ ಫಿಶ್‌ಮಿಲ್ ಉದ್ದಿಮೆಯ ಎಲ್ಲಾ ಉಪಕರಣಗಳನ್ನು ಕಾಲಕಾಲಕ್ಕೆ ಸುಸಜ್ಜಿತವಾಗಿ ಇಟ್ಟುಕೊಳ್ಳುವಂತೆ KSPCB ವತಿಯಿಂದ ನೀಡಲಾದ ಸಮ್ಮತಿ ಪತ್ರಗಳಲ್ಲಿ ಷರತ್ತು ವಿಧಿಸಿದೆ. ಉಳ್ಳಾಲದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಫಿಶ್‌ಮಿಲ್ ಉದ್ದಿಮೆಗಳು ಮಂಡಳಿಯು ವಿಧಿಸಿದ್ದ ನಿಬಂಧನೆಗಳನ್ನು ಸಂಪೂರ್ಣವಾಗಿ ಪಾಲಿಸದ ಕಾರಣ ಮತ್ತು ಈ ಹಿಂದೆ ಮಂಡಳಿಯಿಂದ ನೀಡಲಾದ ಸಮ್ಮತಿ ಪತ್ರದ ನಿಬಂಧನೆಗಳನ್ನು ಉಲ್ಲಂಘಿಸಿದ್ದರಿಂದ, ಸದರಿ ಉದ್ದಿಮೆಗಳಿಗೆ ದಿನಾಂಕ: 05.08.2022 ರಂದು ಮಂಡಳಿಯಿಂದ ಜಲ ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1974ರ ಅಧಿನಿಯಮ 33 (ಎ) ಮತ್ತು ವಾಯು ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1981ರ ಅಧಿನಿಯಮ 31 (ಎ)ರ ಅಡಿಯಲ್ಲಿ ಮುಚ್ಚುವ ಆದೇಶವನ್ನು ನೀಡಲಾಗಿತ್ತು.

ಈ ನಿರ್ದೇಶನಗಳ ವಿರುದ್ಧ ಉದ್ದಿಮೆದಾರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್ ಅರ್ಜಿಗಳಿಗೆ ಸಂಬಂಧಿಸಿದಂತೆ, ಮಾನ್ಯ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ ಸದರಿ ಉದ್ದಿಮೆಗಳು, ಅನುಪಾಲನಾ ವರದಿಯೊಂದಿಗೆ ಸಮ್ಮತಿ ಪತ್ರದ ನವೀಕರಣಕ್ಕಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಅರ್ಜಿಗಳನ್ನು ಆಗಸ್ಟ-2022 ರಿಂದ ಡಿಸೆಂಬರ್ 2022ರ ಅವಧಿಯಲ್ಲಿ ವಿವಿಧ ದಿನಾಂಕಗಳಂದು ಸಲ್ಲಿಸಿದ್ದು, ಸದರಿ ಕೈಗಾರಿಕೆಗಳನ್ನು ದಿನಾಂಕ: 09.02.2023 ರಂದು ಪರಿವೀಕ್ಷಣೆ ಮಾಡಿ ಮಾರ್ಚ್-2023 ರಿಂದ ಅಕ್ಟೋಬರ್-2023ರ ಅವಧಿಯಲ್ಲಿ ವಿವಿಧ ದಿನಾಂಕಗಳಂದು ಮೌಖಿಕ ವಿಚಾರಣೆ ನಡೆಸಲಾಗಿದೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಪರಿವೀಕ್ಷಣೆಯ ಸಂದರ್ಭದಲ್ಲಿ ಗಮನಿಸಿದ್ದ ಸಮ್ಮತಿ ಪತ್ರದ ಷರತ್ತುಗಳ ಉಲ್ಲಂಘನೆಗಳಿಗೆ ಉದ್ದಿಮೆದಾರರು ನೀಡಿದ ಅನುಪಾಲನಾ ವರದಿಯನ್ನು ಆಧಾರವಾಗಿಟ್ಟುಕೊಂಡು ಉದ್ದಿಮೆಗಳು ಸಲ್ಲಿಸಿದ್ದ ಸಮ್ಮತಿ ಪತ್ರದ ನವೀಕರಣದ ಅರ್ಜಿಗಳನ್ನು ಜೂನ್-2023 ರಿಂದ ನವೆಂಬರ್-2023ರ ಅವಧಿಯಲ್ಲಿ ನಿಯಮಾನುಸಾರ ತಿರಸ್ಕರಿಸಿ, ಮಂಡಳಿಯು ಆದೇಶಿಸಿರುತ್ತದೆ.

ಸದರಿ ಸಮ್ಮತಿ ಪತ್ರಗಳ ನಿರಾಕರಣೆಯ ನಂತರ ಉದ್ದಿಮೆಗಳ ಕಾರ್ಯಾಚರಣೆಯ ಸ್ಥಿತಿಯನ್ನು ದಿನಾಂಕ: 29.11.2023 & 01.12.2023 ರಂದು ಸ್ಥಳ ಪರಿಶೀಲನೆ ನಡೆಸಿ, ಮಹಜರ್ ಕಾರ್ಯವನ್ನು ಕೈಗೊಂಡು ಕಲುಷಿತ ನೀರಿನ ಮಾದರಿಗಳನ್ನು ಕಾನೂನು ರೀತಿಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸಂಗ್ರಹಿಸಿದೆ. ವಿಶ್ಲೇಷಣಾ ವರದಿ ಸ್ವೀಕೃತವಾದ ನಂತರ ಪರಿಶೀಲಿಸಿ ಉಲ್ಲಂಘಿಸಿರುವ ಉದ್ದಿಮೆಗಳ ವಿರುದ್ಧ ಮಂಡಳಿಯ ವತಿಯಿಂದ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ.

ಮುಂದುವರೆದು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯು ಈ ಫಿಶ್ ಮೀಲ್ ಘಟಕಗಳ ಉದ್ದಿಮೆದಾರರು ತಮ್ಮ ಘಟಕಗಳನ್ನು ಸ್ಥಳಾಂತರಿಸಲು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಿಂದ ಯಾವುದೇ ವಿಶೇಷ ಪ್ಯಾಕೇಜ್ ಅನ್ನು ನೀಡುವುದಿಲ್ಲ ಎಂದು ತಿಳಿಸಿರುತ್ತದೆ. ಅಲ್ಲದೆ, ಒಂದು ವೇಳೆ ಸದರಿ ಘಟಕಗಳು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (KIADB) ಅಭಿವೃದ್ಧಿ ಪಡಿಸಿದ ಕೈಗಾರಿಕಾ ಪ್ರದೇಶಗಳಿಗೆ ಸ್ಥಳಾಂತರಗೊಳ್ಳಲು ಇಚ್ಛಿಸಿದಲ್ಲಿ ನಿವೇಶನಗಳು ಲಭ್ಯವಿದ್ದಲ್ಲಿ ಪ್ರಸ್ತುತ ಹಂಚಿಕೆ ದರದಲ್ಲಿ ಹಂಚಿಕೆ ಮಾಡಬಹುದಾಗಿರುತ್ತದೆ. ಹಾಗೂ, ಹೊಸ ಫಿಶ್ ಮೀಲ್ ಘಟಕಗಳನ್ನು ಕೆ.ಐ.ಎ.ಡಿ.ಬಿ ಅಭಿವೃದ್ಧಿಪಡಿಸಿದ ಕೈಗಾರಿಕಾ ಪ್ರದೇಶಗಳಲ್ಲಿ ಸ್ಥಾಪನೆ ಮಾಡಿದರೆ ಕೈಗಾರಿಕಾ ನೀತಿ, 2020-25 ರನ್ವಯ ರಿಯಾಯಿತಿ ಹಾಗೂ ಉತ್ತೇಜನಗಳನ್ನು ವಿಸ್ತರಿಸಲಾಗುತ್ತದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯು ತಿಳಿಸಿರುತ್ತದೆ.

**ಸಂಖ್ಯೆ:** ಅಪಜೀ 278 ಇಎನ್ ವಿ 2023

Bchaids

**(ಈಶ್ವರ್ ಬಿ. ಖಂಡ್ರೆ)**
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು